ಇ) 2012–13 ರಿಂದ 2014–15ನೇ ಸಾಲಿನ ವರೆಗೆ ಜಲಸಂಪನ್ಮೂಲ ಇಲಾಖೆ (ಭಾರಿ ಮತ್ತು ಮಧ್ಯಮ ನೀರಾವರಿ) ಯಲ್ಲಿ ಸಾಧಿಸಿದ ಭೌತಿಕ ಪ್ರಗತಿಯ ವಿವರಗಳು ಕೆಳಕಂಡಂತಿವೆ.

ಕ್ರ.ಸಂ.	ವರ್ಷ	ಭೌತಿಕ (ಹೆಕ್ಟೇರುಗಳಲ್ಲಿ)
1	2012–13	53743
2	2013–14	93851
3	2014–15	69554

ಭೂ ಕಂದಾಯ ಅಧಿನಿಯಮ 94 (ಸಿ) ಅಡಿಯಲ್ಲಿ ಸ್ವೀಕರಿಸಿದ ಅರ್ಜಿಗಳು

927(802); ಶ್ರೀ ಬಣಕಾರ್ ಯು.ಬಿ.

ಅ) ಭೂಕಂದಾಯ ಅಧಿನಿಯಮ 94(ಸಿ) ಅಡಿಯಲ್ಲಿ ಸರ್ಕಾರಿ ಜಮೀನನ್ನು ಅಕ್ರಮ ಸಕ್ರಮಗೊಳಿಸಲು ತಾಲ್ಲೂಕುವಾರು ಸ್ವೀಕರಿಸಲಾದ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಅವು ಈಗ ಯಾವ ಹಂತದಲ್ಲಿವೆ;

ಇ) ಅವುಗಳನ್ನು ವಿಲೇವಾರಿ ಮಾಡಲು ಕಾಲಮಿತಿ ನಿಗಧಿ ಮಾಡಲಾಗುವುದೇ?

ಶ್ರೀ ವಿ. ಶ್ರೀನಿವಾಸ್ ಪ್ರಸಾದ್ (ಕಂದಾಯ ಸಚಿವರು)

ಅ) ಕರ್ನಾಟಕ ಭೂಕಂದಾಯ ಅಧಿನಿಯಮ 1964 ಕಲಂ 94(ಸಿ) ಅಡಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಅನಧಿಕೃತವಾಗಿ ಕಟ್ಟಿರುವ ಮನೆಗಳನ್ನು ಸಕ್ರಮಗೊಳಿಸಲು ರಾಜ್ಯಾದ್ಯಂತ 348630 ಅರ್ಜಿಗಳನ್ನು

ಸ್ವೀಕರಿಸಲಾಗಿರುತ್ತದೆ. ತಾಲ್ಲೂಕುವಾರು ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) 3284 ಪ್ರಕರಣಗಳಲ್ಲಿ ಹಕ್ಕು ಪತ್ರ ವಿತರಿಸಲಾಗಿದ್ದು, ಉಳಿದ ಪ್ರಕರಣಗಳು ಪರಿಶೀಲನೆಯಲ್ಲಿವೆ.

ಇ) ಅಧಿಸೂಚನೆ ಸಂಖ್ಯೆ:ಆರ್‌ಡಿ 376 ಎಲ್‌ಜಿಪಿ 2013 ದಿನಾಂಕ: 03–03–2014 ರಲ್ಲಿ ಕರ್ನಾಟಕ ಭೂಕಂದಾಯ (ತಿದ್ದುಪಡಿ) ನಿಯಮಗಳು 2014 ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳ ಒಳಗಾಗಿ ಅರ್ಜಿಗಳನ್ನು ವಿಲೇವಾರಿ ಮಾಡಲು ಕಾಲಮಿತಿ. ನಿಗಧಿ ಮಾಡಲಾಗಿದೆ.

ಚಿಮ್ಮಲಗಿ ಏತನೀರಾವರಿ ಯೋಜನೆ

930(1953); ಶ್ರೀ ಭೂಸನೂರ ರಮೇಶ್ ಬಾಳಪ್ಪ (ಸಿಂಧಗಿ)

ಅ) ಚಿಮ್ಮಲಗಿ ಏತ ನೀರಾವರಿ ಯೋಜನೆಯಡಿಯಲ್ಲಿ ಬರುವ ಕೋರವಾರ ಶಾಖಾ ಕಾಲುವೆಯು ಎಷ್ಟು ಕಿಲೋಮೀಟರ್ ಉದ್ದವಿರುತ್ತದೆ. ಈ ಕಾಲುವೆಯಿಂದ ಎಷ್ಟು ಕ್ಷೇತ್ರ ನೀರಾವರಿಗೊಳಪಡುತ್ತದೆ; (ವಿವರ ನೀಡುವುದು)

ಆ) ಈ ಯೋಜನೆಯಡಿಯಲ್ಲಿ ಇನ್ನೂ ಹೆಚ್ಚಿನ ಪ್ರದೇಶವನ್ನು ನೀರಾವರಿಗೊಳಪಡಿಸುವ ಸಲುವಾಗಿ ಕಾಲುವೆಯ ವಿಸ್ತೀರ್ಣವನ್ನು ವಿಸ್ತರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಇ) ಹಾಗಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಕಾಲುವೆಯ ವಿಸ್ತೀರ್ಣವನ್ನು ಹೆಚ್ಚಿಸಿ ರೈತರ ಭೂಮಿಗಳನ್ನು ನೀರಾವರಿಗೊಳಪಡಿಸಲಾಗುವುದು;